# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 742 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 22-02-2022 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರಸ್ತುತ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಸ್ವಂತ ಕಟ್ಟಡ ಇಲ್ಲದಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; | ಪ್ರಸ್ತುತ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ 2 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ. |
| ಆ. | ಸ್ವಂತ ನಿವೇಶನ ಹೊಂದಿರದ ಅಂಗನವಾಡಿಗಳಿಗೆ ನಿವೇಶನ/ಕಟ್ಟಡ ನೀಡುವ ಕಾರ್ಯ ನಡೆಯುತ್ತಿದೆಯೇ; | ಬೆಳ್ತಂಗಡಿ ಯೋಜನಾ ವ್ಯಾಪ್ತಿಯಲ್ಲಿ ನಿವೇಶನ ಇರುವ ಗ್ರಾಮೀಣ ಪ್ರದೇಶದ ಅಂಗನವಾಡಿ ಕೇಂದ್ರಕ್ಕೆ ಕಟ್ಟಡ ನಿರ್ಮಾಣ ಪ್ರಗತಿ ಹಂತದಲ್ಲಿರುತ್ತದೆ. ಸ್ವಂತ ಕಟ್ಟಡ ಇಲ್ಲದಿರುವ ಮತ್ತೊಂದು ಅಂಗನವಾಡಿ ಕೇಂದ್ರವು ನಗರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕೇಂದ್ರಕ್ಕೆ ನಿವೇಶನ ಲಭ್ಯವಿರುತ್ತದೆ. |
| ಇ. | ತಾಲ್ಲೂಕಿನಲ್ಲಿರುವ ಒಟ್ಟು ಅಂಗನವಾಡಿಗಳು ಎಷ್ಟು; ಒಟ್ಟು ಮಕ್ಕಳ ಸಂಖ್ಯೆ ಎಷ್ಟು; | ಬೆಳ್ತಂಗಡಿ ತಾಲೂಕಿನಲ್ಲಿ 324 ಅಂಗನವಾಡಿ ಕೇಂದ್ರಗಳಿವೆ. 19760 ಮಕ್ಕಳನ್ನು ಅಂಗನವಾಡಿ ಕೇಂದ್ರಗಳಲ್ಲಿ ದಾಖಲಿಸಲಾಗಿದೆ. |
| ಈ. | ಕನಿಷ್ಠ ಮಕ್ಕಳ ಸಂಖ್ಯೆ ಹೊಂದಿರುವ ಅಂಗನವಾಡಿಗಳೆಷ್ಟು; | ಬೆಳ್ತಂಗಡಿ ಯೋಜನೆಯಲ್ಲಿ 02 ಅಂಗನವಾಡಿಗಳು ಕನಿಷ್ಠ ಮಕ್ಕಳ ಸಂಖ್ಯೆಯನ್ನು ಹೊಂದಿರುತ್ತವೆ. |
| ಉ. | ಅಂಗನವಾಡಿಯಲ್ಲಿ ಪ್ರತಿ. ಮಗುವಿಗೆ ತಗಲುವ ದಿನದ ವೆಚ್ಚವೆಷ್ಟು? | ಅಂಗನವಾಡಿಯಲ್ಲಿ ಪ್ರತಿ ಮಗುವಿಗೆ ಪೂರಕ ಪೌಷ್ಟಿಕ ಆಹಾರಕ್ಕೆ ದಿನ ಒಂದಕ್ಕೆ ರೂ.8.00, ಕ್ಷೀರ ಭಾಗ್ಯ ಯೋಜನೆಯಡಿ ದಿನ ಒಂದಕ್ಕೆ ರೂ. 4.01 ವೆಚ್ಚದಲ್ಲಿ ವಾರದಲ್ಲಿ 5 ದಿನ 150 ಎಂ.ಎಲ್ ಹಾಲು, ದಿನ ಒಂದಕ್ಕೆ ರೂ. 5/- ವೆಚ್ಚದಲ್ಲಿ ವಾರದಲ್ಲಿ 2 ದಿನ ಕೋಳಿ ಮೊಟ್ಟೆಯನ್ನು ನೀಡಲಾಗುತ್ತಿದೆ. |

ಸಂ: ಮಮಇ 50 ಐಸಿಡಿ 2022

Halappa B

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.